SRI K.N.NAGE GOWDA : I am sorry. This is not the correct procedure. I have got every right to ask clarification.

MR. SPEAKER : I am sorry. Let the better man come and take charge. I am adjourning the House.

(The house adjourned at 12.35p.m.)

(ಸಭೆಯು 12.50ಕ್ಕೆ ಪುನ : ಸಮಾವೇಶಗೊಂಡಿತು.)

(ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಸಭಾಧ್ಯಕ್ಷರೇ, ತಾವು ಅನುಮತಿಯನ್ನು ಕೊಟ್ಟರೆ, ತಮ್ಮ ಅನುಮತಿಯನ್ನು ತಗೆದುಕೊಂಡು ನನ್ನ ಅನಿಸಿಕೆಗಳನ್ನು ಹೇಳಬೇಕು ಎಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ನಡೆದಂಥ ಘಟನೆ ನನ್ನ ಮನಸ್ಸಿಗೂ ಸಹ ಬಹಳ ನೋವನ್ನು ತಂದುಕೊಟ್ಟಿದೆ. ನನ್ನ ಆತುರ ಏನಿತ್ತು ಎಂದು ಹೇಳಿದರೆ ಇವತ್ತು ಸದನ ಕೊನೆ ದಿವಸ. ರಾಜ್ಯಸರ್ಕಾರದಿಂದ ಬೆಲ್ಲಕ್ಕೆ ಬೆಂಬಲಿತ ಬೆಲೆಯನ್ನು ಕೇಳಬೇಕು ಎನ್ನುವ ಆತುರದಿಂದ ತಮ್ಮ ಮನಸ್ಸಿಗೆ ನಾನು ನೋವು ಮಾಡಿದೆ. ತಾವು ದಯಮಿಟ್ಟು ಕ್ಷಮಿಸಬೇಕು. ತಾವು ನಾನೂ 20-26 ವರ್ಷಗಳ ಸ್ನೇಹಿತರು. ನಿಮ್ಮನ್ನು ನಾನು ಬಹಳ ಚೆನ್ನಾಗಿ ಬಲ್ಲೆ ಮತ್ತು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ಆದರೆ ಈ ರೀತಿ ಘಟನೆ ಆಗಬಾರದಾಗಿತ್ತು. ಅದಕ್ಕೆ ನಾನು ಕಾರಣ ಏನ್ನುವುದನ್ನು ಸಂಪೂರ್ಣವಾಗಿ ಒಪ್ಪಿಕೊಂಡು ತಾವು ಮನಬಿಲಿಸಿಕೊಂಡು ತಾವು ಇಲ್ಲೇ ಕಲಸ ಮಾಡಬೇಕು. ತಾವು ಅತ್ಯುತ್ತಮವಾದಂಥ ಅಧ್ಯಕ್ಷರು. ಅತ್ಯಂತ ತಿಳಿವಳಿಕೆಯುಳ್ಳವರು ಸಂಸದೀಯ ಪಟುಗಳು. ಅತ್ಯಂತ ಸಂಸದೀಯ ಪಟು ಎಂದು ಹೆಸರನ್ನು ಪಡೆದುಕೊಂಡಿರುವವರು. ತಮ್ಮ ಸೇವೆ ನಮ್ಮೆಲ್ಲರಿಗೂ ಅಗತ್ಯ ಇದೆ. ಅದರಲ್ಲೂ ವಿಶೇಷವಾಗಿ ನೀವು ನನ್ನ ಅತ್ಯಂತ ಆತ್ಮೀಯ ಸ್ನೇಹಿತರು. ಆದ್ದರಿಂದ ತಾವು ಆ ಸ್ಥಾನದಲ್ಲಿ ಹುಂದುವರೆದು ನಮ್ಮೆಲ್ಲರಿಗೂ ಸಹ ತಮ್ಮ ಸೇವೆ ಅಗತ್ಯವಾಗಿ ಆಗಬೇಕು. ಇಲ್ಲಿ ನಡೆದ ಘಟನೆಗೆ ನಾನೊಬ್ಬನೇ ಕಾರಣ ಏನ್ನುವ ಹೊಣೆಯನ್ನು ಹೊತ್ತು ಕ್ಷಮಾಪಣೆ ಕೇಳುತ್ತೇನೆ.

ಅಧ್ಯಕ್ಷರು : ಅತ್ಯಂತ ಆತ್ಮೀಯರಾದದ್ದರಿಂದಲೇ ನನಗೆ ಬೇಸರ ಆಯಿದ್ದು. ಮತ್ತ ಇನ್ನೇನು ಕಾರಣವಿಲ್ಲ. ಬೇರೆ ಯಾರಾದರೂ ಮಾಡಿದ್ದರೆ ಹಾಗೆಯೇ ತಗೆದುಕೊಳ್ಳುತ್ತಿದ್ದ. ದಯಮಾಡಿ ಏನೂ ತಪ್ಪು ತಿಳಿದುಕೊಳ್ಳಬೇಡಿ.

ಪ್ರಕಟಣೆ

ಅಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ

119ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ 8 ನೇ ಮಾರ್ಚ್ 1996ರಂದು ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕ, 1996ನ್ನು ತಿದ್ದುಪಡಿಯೊಂದಿಗೆ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. "ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ ೮ನೇ ಮಾರ್ಚ್ 1996ರಂದು ಮೋಟಾರು ವಾಹನಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 1996ನ್ನು ಯಾವುದೇ ತಿದ್ದುಪಡಿ ಇಲ್ಲದೇ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

ವಿತ್ತೀಯ ಕಾರ್ಯಕಲಾಪಗಳು.

1996-97ನೇ ಸಾಲಿನ ಆಯವ್ಯಯದ ಮೇಲಿನ (1ರಿಂದ 60) ಬೇಡಿಕೆಗಳನ್ನು ಮಂಡಿಸುವುದು ಹಾಗೂ ಅಂಗೀಕರಿಸುವುದು.

ಶ್ರೀ ಸಿದ್ಧರಾಮಯ್ಯ (ಹಣಕಾಸು ಯೋಜನೆ ಮತ್ತು ಸಾಂಖ್ಯಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 31-3-1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ (ಲೇಖಾನುದಾನ), 1ರಿಂದ 60 ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ, ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ' ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಹೀಗಿದೆ : "ದಿನಾಂಕ 31-3-1997 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ (ಲೇಖಾನುದಾನ), 1 ರಿಂದ 60 ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ, ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.

ಪ್ರಸ್ತಾವವು ಅಂಗೀಕೃತವಾಗಿದೆ.

ಶ್ರೀ ಸಿದ್ಧರಾಮಯ್ಯ : (ಹಣಕಾಸು, ಯೋಜನೆ ಮತ್ತು ಸಾಂಖ್ಯಿಕ ಸಚಿವರು) : ಮಾನ್ಯ ಅಧ್ಯಕ್ಷರೇ, "ದಿನಾಂಕ : 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1, 2, 5, 8, 9, 12, 13, 14, 15, 16, 17, 18, 19,